3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 26/2020**

ಪ್ರಾಸಾ 5

ಚಾಸಾ 5

| | |
|---|---|
| ಹೆಸರು | ಮೋಹನ |
| ಗಂಡನ ಹೆಸರು | ದಾಸಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಆಟೋ ಚಾಲಕ |
| ವಾಸಸ್ಥಳ | ಕಾರೇಹಳ್ಳಿ |

ಸಾಕ್ಷಿಯನ್ನು ದಿನಾಂಕ 26.06.2024 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ದಿನಾಂಕ 12.10.2019 ರಂದು ನಾನು ಮಧ್ಯಾಹ್ನ 3 ಗಂಟೆಗೆ ಕಾರೇಹಳ್ಳಿಯಿಂದ ಸಿಂಗದಹಳ್ಳಿಗೆ ಬೈಕಿನಲ್ಲಿ ಹೋಗುತ್ತಿದ್ದಾಗ ಚಾಸಾ.1 ರವರ ಮೇಲೆ ಗಂಗಣ್ಣ, ಅಂಜನಪ್ಪ, ಬಸವರಾಜು ರವರು ಜಗಳ ಮಾಡುತ್ತಿದ್ದರು. ಅವರನ್ನು ನಾನು ಅಚ್ಚುಕಟ್ಟಾಗಿ ನೋಡಿರುವುದಿಲ್ಲ. ಅವರು ಇಂದು ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

2) ಆರೋಪಿ ಗಂಗಣ್ಣ ರವರು ಚಾಸಾ.1 ರವರಿಗೆ ಒದೆ ಕೊಡುತ್ತಿದ್ದರು. ಚಾಸಾ.1 ರವರ ನೈಟಿಯನ್ನು ಹರಿದಿದ್ದರು ಮತ್ತು ಮಾದಿಗಮುಂಡೆ, ನನ್ನ ಜಮೀನಿಗೆ ಏಕೆ ಬಂದಿದ್ದೀಯಾ ಎಂದು ಬೈಯುತ್ತಿದ್ದರು. ಆಗ ಸಾವಿತ್ರಮ್ಮ ಎಂಬುವವರು ಇದ್ದರು. ಅವರು ಚಾಸಾ.1 ರವರನ್ನು ಬಿಡಿಸಿಕೊಳ್ಳಲು ಹೋದಾಗ ಅವರ ಬೆನ್ನಿಗೆ ಒಬ್ಬ ವ್ಯಕ್ತಿ ದೊಣ್ಣೆಯಿಂದ

ಹೊಡೆದಿರುತ್ತಾರೆ. ಅವರ ಹೆಸರು ಗೊತ್ತಿಲ್ಲ. ಈ ಬಗ್ಗೆ ಚಾಸಾ.1 ರವರ ಹತ್ತಿರ ವಿಚಾರಿಸಿದಾಗ ಅಡಿಕೆ ತೋಟ ನಮ್ಮದು ಎಂದು ಚಾಸಾ.1 ರವರು ಹೇಳಿದ್ದರಿಂದ ಆರೋಪಿಗಳು ಅಡಿಕೆ ತೋಟ ನಮ್ಮದು ಎಂದು ಗಲಾಟೆ ಮಾಡಿರುತ್ತಾರೆಂದು ಗೊತ್ತಾಯಿತು. ನಂತರ ನಾನು ಆಂಬುಲೆನ್ಸ್ ವಾಹನಕ್ಕೆ ಕರೆ ಮಾಡಿ ಚಾಸಾ.1 ಮತ್ತು 2 ರವರನ್ನು ಚಿಕ್ಕನಾಯಕನಹಳ್ಳಿ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ನಂತರ ಚಾಸಾ.1 ರವರು ದೂರನ್ನು ನೀಡಿರುತ್ತಾರೆಂದು ಪೊಲೀಸರು ನನಗೆ ಹೇಳಿರುತ್ತಾರೆ. ನನ್ನನ್ನು ತಿಪಟೂರು ಪೊಲೀಸರು ವಿಚಾರಣೆ ಮಾಡಿರುತ್ತಾರೆ.

3) ಚಾಸಾ.1 ರವರು ಕೆಂಪು ಬಣ್ಣದ ನೈಟಿಯನ್ನು ಧರಿಸಿದ್ದರು. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದೊಣ್ಣೆ ಮತ್ತು ನೈಟಿಯನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿದೆ. ಚಾಸಾ.1 ರವರು ಯಾವ ಜಾತಿಯವರು ಎಂದು ನಾನು ಕೇಳಿರುವುದಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

4) ನನಗೆ ಇಬ್ಬರು ಮಕ್ಕಳು ಎಂದರೆ ಸರಿ. ನಾನು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಚಾಸಾ.1 ರವರಿಗೆ ಇಬ್ಬರು ಗಂಡಸರು, ಚಾಸಾ.2 ರವರಿಗೆ ಇಬ್ಬರು ಗಂಡಸರು ಹೊಡೆದು ಗಲಾಟೆ ಮಾಡುತ್ತಿದ್ದರು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ಅವರು

ನಮ್ಮ ತೋಟಕ್ಕೆ ಏಕೆ ಬಂದಿದ್ದೀರಾ, ಮಾದಿಗ ಮುಂಡೆ ಎಂದು ಬೈದು ಜಾತಿ ನಿಂದನೆ ಮಾಡಿರುತ್ತಾರೆಂದರೆ ಸರಿ. ಚಾಸಾ.1 ಮತ್ತು 2 ರವರು ಕಿರುಚಾಡುತ್ತಿದ್ದರು ಎಂದರೆ ಸರಿ. ನಾನು ಮತ್ತು ಚಾಸಾ.4 ರವರು ಸೇರಿಕೊಂಡು ಚಾಸಾ.1 ಮತ್ತು 2 ರವರನ್ನು ಬಿಡಿಸಿಕೊಂಡಿರುತ್ತೇವೆ ಎಂದರೆ ಸರಿ. ನಾನು ನೋಡಿದಾಗ ಚಾಸಾ.1 ರವರ ನೈಟಿಯ ಮುಂಭಾಗ ಹರಿದಿತ್ತು ಎಂದರೆ ಸರಿ. ಅಲ್ಲಿಯವರೆಗೆ ನನಗೆ ಆರೋಪಿಗಳು ಮತ್ತು ಚಾಸಾ.1 ರವರು ಯಾವ ಜಾತಿಯವರು ಎಂದು ಗೊತ್ತಿರಲಿಲ್ಲ ಎಂದರೆ ಸರಿ. ಚಾಸಾ.1 ಮತ್ತು 2 ರವರನ್ನು ವಿಚಾರಿಸಿದಾಗ ಗಲಾಟೆ ಆದ ಸ್ಥಳದಲ್ಲಿರುವ ಅಡಿಕೆ ತೋಟದ ಜಮೀನಿನ ಅನುಭವ ಮತ್ತು ಸ್ವಾಧೀನದ ವಿಚಾರವಾಗಿ ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜಾತಿಗೆ ಸೇರಿದ ಚಾಸಾ.1 ರವರ ಮನೆಯವರಿಗೂ ಹಾಗೂ ಬರೆಸಿಡಿಲಹಳ್ಳಿ ಗ್ರಾಮದ ಒಕ್ಕಲಿಗೆ ಜಾತಿಗೆ 1 ರಿಂದ 3 ನೇ ಆರೋಪಿಗಳು, ಮಡಿವಾಳ ಜಾತಿಗೆ ಸೇರಿದ 4 ನೇ ಆರೋಪಿಗಳಿಗೆ ತಕರಾರು ಇರುತ್ತದೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ಚಾಸಾ.1 ರವರು ತಮ್ಮ ತೋಟಕ್ಕೆ ಹೋದಾಗ 1 ನೇ ಆರೋಪಿ ಚಾಸಾ.1 ರವರಿಗೆ ಏಕೆ ನಮ್ಮ ತೋಟಕ್ಕೆ ಬಂದಿದ್ದೀಯಾ ಮಾದಿಗ ಮುಂಡೆ ಎಂದು ಬೈದು ಕೈಯಿಂದ ಹೊಡೆದು ಗಲಾಟೆ ಮಾಡಿದ ಎಂದು ತಿಳಿಸಿದ ಎಂದರೆ ಸರಿ. 2 ನೇ ಆರೋಪಿಯು ಚಾಸಾ.1 ರವರಿಗೆ ಮಾದಿಗಮುಂಡೆ ಅತ್ಯಾಚಾರ ಮಾಡಿ ಸಾಯಿಸಿ ಇಲ್ಲೇ ಹೂತು ಹಾಕುತ್ತೇನೆ ಎಂದು ಬೈದಿರುತ್ತಾರೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ಆ ಸಮಯದಲ್ಲಿ ಚಾಸಾ.1 ರವರ ನೈಟಿ ಹರಿದಿತ್ತು ಎಂದರೆ ಸರಿ. ಕೈಯಿಂದ ಚಾಸಾ.1 ರವರ ಎದೆಗೆ ಗುದ್ದಿದ್ದರು ಎಂದರೆ ಸರ. ಬಿಡಿಸಿಕೊಳ್ಳಲು ಬಂದ ಚಾಸಾ.2 ರವರಿಗೆ 3 ನೇ ಆರೋಪಿ ಕಾಲಿನಿಂದ ಒದ್ದು , ಕೈಯಿಂದ ಕುತ್ತಿಗೆಗೆ ಗುದ್ದಿ ಮಾದಿಗ ಮುಂಡೆ ನಮ್ಮ ಜಮೀನಿಗೆ ಏಕೆ ಬಂದಿದ್ದೀಯಾ ಎಂದು ಗಲಾಟೆ ಮಾಡಿದ ಎಂದರೆ ಸರಿ. 4 ನೇ ಆರೋಪಿಯು ಚಾಸಾ.2 ರವರಿಗೆ ಮಾದಿಗ ಮುಂಡೆ ಎಂದು ಬೈದು, ದೊಣ್ಣೆಯಿಂದ ಬೆನ್ನಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಈ ಎಲ್ಲಾ ವಿಚಾರಗಳನ್ನು ಚಾಸಾ.1 ಮತ್ತು 2 ರವರು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಚಾಸಾ.1 ಮತ್ತು 2 ರವರನ್ನು ಅವರ ಮನೆಯ ಹತ್ತಿರ ಕರೆದುಕೂಂಡು ಹೋಗಿ ಬಿಟ್ಟಿರುತ್ತೇನೆ ಎಂದರೆ ಸರಿ.

ನಂತರ ಅವರು ಅಂಬುಲೆನ್ಸ್ ವಾಹನದಲ್ಲಿ ಚಿಕಿತ್ಸೆಗಾಗಿ ಹೋಗಿರುತ್ತಾರೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಚಾಸಾ.1 ಮತ್ತು 2 ರವರಿಗೆ ಹೊಡೆಯುತ್ತಿದ್ದ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಗಳಾಗಿರುತ್ತಾರೆ ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ.N.B. ವಕೀಲರಿಂದ :**

(ಪಾಟೀಸವಾಲನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ